ಮೂಡಿಸುವ ಭಕ್ತರ ಈ ಕ್ರಮವನ್ನು ಕೆಲವೊಮ್ಮೆ ಭಯದಿಂದ ದೇವರನ್ನು ಸಂಪ್ರೀತಿಗೊಳಿಸುವ ಕ್ರಿಯೆ ಎಂದೂ ಅರ್ಥೈಸಲಾಗುತ್ತದೆ. ಪ್ರಕೃತಿಯ ವಿಕೋಪಗಳು ಎದುರಾದಾಗ ಸಾಕಷ್ಟು ದೈವಿಕ ಆಚರಣೆಗಳಲ್ಲಿ ದೇಹದಂಡನೆಯ ಕ್ರಮ ಇರುವುದು ಕಂಡು ಬರುತ್ತದೆ. ಮಾರಿಯಮ್ಮ, ಪ್ಲೇಗಮ್ಮ, ಕೊರೋನಾ ತಾಯಿ - ಇತ್ಯಾದಿಗಳ ಸೇವೆಗಳನ್ನು ನಾವಿಲ್ಲಿ ಕಾಣಬಹುದು.

ನನ್ನ ಬಾಲ್ಯದಲ್ಲಿ ದ್ರೌಪದಮ್ಮ ಎನ್ನುವ ಮಹಿಳೆ ಇದ್ದರು. ಈಕೆ ಊರಿನ ಬೆಟ್ಟದ ಮೇಲಿದ್ದ ಗಂಡಿ ನರಸಿಂಹ ಸ್ವಾಮಿಯ ಮಹಾ ಭಕ್ತೆ. ಈಕೆ ದೇವರಿಗೆ ಬೆದರಿಸಿ ತನ್ನ ಕೆಲಸಗಳನ್ನು ನಡೆಸಿಕೊಡೆಂದು ಬೇಡುತ್ತಿದ್ದಳು. ಒಂದು ವೇಳೆ ಆ ಸ್ವಾಮಿ ಅದಕ್ಕೆ ಒಲಿಯದಿದ್ದರೆ ಆಕೆಯ ಮನಸ್ಸು ಕೆಡುತ್ತಿತ್ತು. ಎಲ್ಲಾ ಭಕ್ತರು ನೆರೆದಿರುವ ಹೊತ್ತಿನಲ್ಲಿ ಅರ್ಚಕರು ಮಂಗಳಾರತಿ ಮಾಡಿ ಆಕೆಯ ಮುಂದೆ ಆರತಿ ಹಿಡಿದರೆ, ಆ ಉರಿಯುವ ಮಂಗಳಾರತಿ ಬತ್ತಿಯನ್ನು ತೆಗೆದುಕೊಂಡು ತನ್ನ ನಾಲಿಗೆ ಮೇಲಿಟ್ಟುಕೊಂಡು ಮುಖವನ್ನು ಪ್ರದಕ್ಷಿಣೆ ರೂಪದಲ್ಲಿ ತಿರುಗಿಸುತ್ತಾ ದೇವರಿಗೆ ಮಂಗಳಾರತಿ ಮಾಡಿ ಬಿಡುತ್ತಿದ್ದಳು. ಆ ದೀಪ ಶಾಂತವಾಗುವ ತನಕವೂ ಆಕೆಯ ಆವೇಶ ನಿಲ್ಲುತ್ತಿರಲಿಲ್ಲ. ನೆರೆದ ಜನರೂ ಅದನ್ನು ಪ್ರೋತ್ಸಾಹಿಸುವಂತೆ ಎಲ್ಲಾ ಗಂಟೆಗಳನ್ನು ಮತ್ತು ಜಾಗಂಟೆಯನ್ನು ಶಕ್ತಿ ಮೀರಿ ಬಾರಿಸುತ್ತಿದ್ದರು. ಆವೇಶ ಇಳಿದಾಗ ಆಕೆಯ ನಾಲಿಗೆ ಸುಟ್ಟು ಕೆಂಪಾಗಿರುತ್ತಿತ್ತು. ಬಾಯಿ ಮುಚ್ಚಿದರೂ ಆಕೆ ನೋವಿನಿಂದ ಕಿರುಚುತ್ತಿದ್ದಳು. ನೋಡುತ್ತಿದ್ದ ನಮಗಂತೂ ಕೈಕಾಲಲ್ಲಿ ನಡುಕ ಬರುತ್ತಿತ್ತು. ಆ ದೇವರಿಗೂ ಹೆದರಿಕೆಯಾಗುತ್ತಿತ್ತೋ ಗೊತ್ತಿಲ್ಲ. ಆಕೆಯ ಕೋರಿಕೆಗಳು ಬಹುತೇಕ ಈಡೇರುತ್ತಿದ್ದವು. ಆಮೇಲೆ ಆಕೆ ಅದು ಹೇಗೆ ನಾಲಿಗೆಯನ್ನು ಸರಿಪಡಿಸಿಕೊಳ್ಳುತ್ತಿದ್ದಳೋ ಗೊತ್ತಿಲ್ಲ, ಕೆಲವೇ ತಿಂಗಳಲ್ಲಿ ಈ ಘಟನೆ ಮರುಕಳಿಸುತ್ತಿತ್ತು.

ವಿಚಿತ್ರವೆಂದರೆ ಬಹುತೇಕ ಧರ್ಮಗಳು ದೇಹ ದಂಡನೆಯನ್ನು ಪ್ರೋತ್ಸಾಹಿಸುತ್ತವೆ. ದೇಹ ಮತ್ತು ಆತ್ಮಗಳು ಪರಸ್ಪರ ವಿರೋಧಿಗಳೆಂದೂ, ದೇಹವನ್ನು ಸಂಪ್ರೀತಿಗೊಳಿಸುತ್ತಾ ಹೋದಂತೆಲ್ಲಾ ಆತ್ಮ ದುರ್ಬಲವಾಗುತ್ತದೆಂದೂ ಧರ್ಮಗಳು ಸಾರಿವೆ. ಈ ಧಾರ್ಮಿಕ ನಿಯಮಗಳು ಕೇವಲ ದೇಹವನ್ನು ಹುರಿಗೊಳಿಸಿ ನಮ್ಮನ್ನು ಆರೋಗ್ಯವಂತರಾಗಿ ಮಾಡುವ ನಿಟ್ಟಿನಲ್ಲಿ ಇದ್ದರೆ ಅವನ್ನು ಒಪ್ಪಿಕೊಳ್ಳಬಹುದು. ಉದಾಹರಣೆಗೆ ಆಗಾಗ ಉಪವಾಸ ಮಾಡುವುದೋ, ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತುವುದೋ, ತಿಂಗಳಿಗೊಮ್ಮೆ ಮೌನವ್ರತ ಆಚರಿಸುವುದೋ, ಯಾವುದೋ ತಿಂಗಳಲ್ಲಿ ಯಾವುದೋ ಧಾನ್ಯವನ್ನು ವರ್ಜ್ಯ ಮಾಡುವುದೋ - ಇತ್ಯಾದಿಗಳು ಆರೋಗ್ಯದ ದೃಷ್ಟಿಯಿಂದ ಒಳ್ಳೆಯವೇ ಆಗಿವೆ. ಆದರೆ ಯಾವಾಗ ದೇಹಕ್ಕೆ ವಿರೋಧಿಯಾಗಿ ನಮ್ಮ ಆಚರಣೆಗಳು ಇರುತ್ತವೋ - ಅಂದರೆ ಚಾಟಿಯಿಂದ ಹೊಡೆದುಕೊಳ್ಳುವುದು, ಕಬ್ಬಿಣದ ಸೂಜಿಯನ್ನು ಚುಚ್ಚಿಕೊಳ್ಳುವುದು, ಅಗತ್ಯ ಮೀರಿ ಉಪವಾಸ ಮಾಡುವುದು, ಆಜನ್ಮ ಬ್ರಹ್ಮಚರ್ಯ, ಕೂದಲನ್ನು ಕೈಯಿಂದಲೇ ಕೀಳುವುದು - ಇವೆಲ್ಲವೂ ದೇವರಲ್ಲಿ ಪಾಪಪ್ರಜ್ಞೆ ಹುಟ್ಟಿಸುವ 'ಎಮೋಷನಲ್ ಬ್ಲಾಕ್‌ಮೇಲ್' ಗಳೇ ಆಗಿರುತ್ತವೆ.

ಆದರೆ, ಭಕ್ತ ಮತ್ತು ಭಗವಂತರ ನಡುವೆ ಇದಕ್ಕೆ ವಿರುದ್ಧವಾದ ನಡವಳಿಕೆಯ ಕ್ರಮವೂ ಇರುವುದು ಕಂಡು ಬರುತ್ತದೆ. 'ನಿನ್ನ ದೇಹವ ದಂಡಿಸಿ ನನ್ನ ಬಯಕೆ ಪೂರೈಸಿಕೊಳ್ಳುವೆ' ಎನ್ನುವ ಹಟಮಾರಿತನವೂ ಭಾರತೀಯ ಭಕ್ತರಲ್ಲಿ ಇದೆ. ಇದರಲ್ಲಿ ದೇವರಿಗೆ ಮೆಣಸಿನಕಾಯಿ ಹೊಗೆ ಹಾಕುವ ಸಂಪ್ರದಾಯ ಜನಪ್ರಿಯವಾದದ್ದು. ತಮ್ಮ ಬಯಕೆಯನ್ನು ದೇವರು ಈಡೇರಿಸದಿದ್ದರೆ ಸಾಕು, ಕಬ್ಬಿಣದ ಪುಟ್ಟಿಯಲ್ಲಿ ಒಂದಿಷ್ಟು ಬ್ಯಾಡಗಿ ಮೆಣಸಿನಕಾಯಿ ತುಂಬಿಸಿ, ಅಡಿಯಲ್ಲಿ ಕೆಂಡ ಸುರಿದು, ಅದನ್ನು ದೇವರ ಮನೆಯಲ್ಲಿ ಇಟ್ಟು, ಬಾಗಿಲನ್ನು ಹಾಕಿ ಬಿಡುತ್ತಾರೆ. ಆ ಮೆಣಸಿನ ಘಾಟಿಗೆ ಒದ್ದಾಡಿ ಹೋಗುವ ದೇವರು ಖಂಡಿತಾ ಒಲಿಯುತ್ತಾನೆಂಬುದು ಭಕ್ತರ ನಂಬಿಕೆ. ಗರ್ಭಗುಡಿಯಲ್ಲಿರುವ ದೇವರ ಮೂರ್ತಿಯನ್ನು ಭಕ್ತರು ಕಲ್ಲಿನ ಮೂರ್ತಿಯೆನ್ನುವುದಕ್ಕಿಂತಲೂ, ನಮ್ಮೊಡನೆ ಇರುವ ಮತ್ತೊಬ್ಬ ವ್ಯಕ್ತಿ ಎಂದು ಭಾವಿಸುವುದೇ ಹೆಚ್ಚು.

ಮತ್ತೊಂದು ವಿಶೇಷ ಸಂಪ್ರದಾಯವನ್ನೂ ಅಲ್ಲಲ್ಲಿ ನೋಡಿದ್ದೇನೆ. ಇದು ಬಹುತೇಕ ಮಳೆಯಿಲ್ಲದ ಬರಗಾಲದಲ್ಲಿ ನಡೆಯುತ್ತದೆ. ಎಷ್ಟೇ ಬೇಡಿಕೊಂಡು ಸೇವೆ ಮಾಡಿದರೂ ಹಳ್ಳಿಗೆ ಮಳೆಯೇ ಬರಲಿಲ್ಲವೆಂದರೆ ಹಳ್ಳಿಗರು ಹತಾಶರಾಗುತ್ತಾರೆ. ಕೊನೆಯ ಅಸ್ತ್ರವಾಗಿ ಊರಿನ ದೇವರಿಗೆ ನಿತ್ಯ ಸ್ನಾನ ಮಾಡಿಸದೆ, ಕುಡಿಯಲು